ಸಂಸಾರಿಯಾಗಲಿಲ್ಲ. ಜಗದ ಕಣ್ಣಲ್ಲಿ ವ್ಯಭಿಚಾರಿಯಾದ.

ನಾನು ಧೇನಿಸುವುದು
ಲಾಮಾ ಗುರುವನ್ನಲ್ಲ
ಅವಳು ಮರಳುವಳು
ಮತ್ತೆ ಮತ್ತೆ ನನ್ನ ಧ್ಯಾನಕ್ಕೆ
ನಗೆಯ ಮೊಗದ
ನನ್ನ ಅನುರಕ್ತೆ

ಎಂದು ಒಪ್ಪಿಕೊಳ್ಳುವ ಪ್ರಾಂಜಲ ಮನಸ್ಸು ಅವನಿಗಿತ್ತು. 'ಅವಳನ್ನು ಧ್ಯಾನಿಸಿದಷ್ಟೆ ತೀವ್ರತೆಯಲ್ಲಿ ನಾನು ಧಮ್ಮವನ್ನು ಧ್ಯಾನಿಸಿದ್ದರೆ ಈ ಬದುಕಿನಲ್ಲೇ ನನಗೆ ಬುದ್ಧತ್ವ(**Enlightenment**) ಪ್ರಾಪ್ತಿಯಾಗಿರುತ್ತಿತ್ತು' ಎಂದು ಸ್ವಯಂ ಗೇಲಿ ಮಾಡಿಕೊಳ್ಳಬಲ್ಲ ಅವನೊಳಗೊಬ್ಬ ದಂಗೆಕೋರ ಸ್ಫೋಟಿಸುತ್ತಿದ್ದ.

ಮಂದಿಯ ಗೊಡ್ಡು ಹರಟೆಗೆ
ನಾನು ತುತ್ತು, ತಿಳಿದಿದೆ ನನಗದು
ಇರಲಿ ಕ್ಷಮೆ, ಹೌದು...
ದೂಷಣೆಗೆ ಯೋಗ್ಯ ನಾನು
ತುದಿಗಾಲಿನಲಿ ನಡೆನಡೆದು
ಸೂಳೆಮನೆ ತಲುಪುವೆನು...

ಎಂದು ಬರೆಯುವ ಅವನ ಧೈರ್ಯಕ್ಕೆ ದೇವರೂ ಬೆಚ್ಚಿ ಬೀಳಬೇಕಿತ್ತು.

★★★

ಈ ಆರನೇ ದಲಾಯಿ ಲಾಮಾಗೆ ಸಂಬಂಧಿಸಿದ ಸ್ಮಾರಕವೊಂದನ್ನು ಈ ರೀತಿ ಎದುರುಗೊಳ್ಳುವೆನೆಂದು ಆ ದಿನ ನಾನು ಖಂಡಿತವಾಗಿಯೂ ಅಂದುಕೊಂಡಿರಲಿಲ್ಲ. ಹೌದು, ಆ ದಿನ ನಾವು ಪಶ್ಚಿಮ ಅರುಣಾಚಲ ಪ್ರದೇಶದ ತವಾಂಗ್ ನಗರಕ್ಕೆ ಸಮೀಪವಿರುವ ಉರ್ಗೆಲಿಂಗ್ ವಿಹಾರದೆದುರು ನಿಂತಿದ್ದೆವು. ನಮ್ಮ ಗೈಡ್ ಕರ್ಮಪಾ ವಾಂಗ್ಚುಕ್, 'ಸರ್, ಇದು ಟಿಬೆಟಿನ ಧರ್ಮಗುರು ಆರನೇ ದಲಾಯಿ ಲಾಮಾ ಜನಿಸಿದ ಮನೆ' ಎಂದು ತಿಳಿಸಿದರು. ಕಾಡಿನ ಹಸಿರು ಮತ್ತು ಹಕ್ಕಿಗಳ ಚಿಲಿಪಿಲಿಗಳ ನಡುವೆ ನಿಂತ ಅದೊಂದು ತೀರಾ ಸರಳ ಕಟ್ಟಡವಾಗಿತ್ತು. ನಾಲ್ಕಾರು ದೊಡ್ಡ ಮರದ ಪೆಟ್ಟಿಗೆಗಳನ್ನು ಜೋಡಿಸಿಟ್ಟಂತಹ ರಚನೆ. ಅದರೊಳಗೆ ನಮ್ಮ ಕಥಾನಾಯಕನಾದ ತ್ಸಂಗ್‌ಯಾಂಗ್ ಗ್ಯಾತ್ಸೊ 1683ರ ಮಾರ್ಚ್ 1ರಂದು ಜನಿಸಿದನು. ದಲಾಯಿ ಲಾಮಾ ಪಟ್ಟಕ್ಕೆ ಏರದೇ ಹೋಗಿದ್ದರೆ ಉಳಿದೆಲ್ಲ ಟಿಬೆಟನ್ನರಂತೆ ಆತನ ಬದುಕೂ ಕಾಲದ ಹೊನಲಿನಲ್ಲಿ ಕೊಚ್ಚಿಹೋಗಿರುತ್ತಿತ್ತು. ತನ್ನ ಪೂರ್ವದ ದಲಾಯಿ ಲಾಮಾಗಳಂತೆ ಬದುಕಿದ್ದರೂ ಆತನ ಚರಿತ್ರೆ ಹತ್ತರಲ್ಲೊಂದು ಎಂಬಂತೆ ದಾಖಲಾಗಿರುತ್ತಿತ್ತು. ಆದರೆ ಅವನು ಇವತ್ತಿಗೂ ನಮ್ಮ ನಡುವೆ ಉಳಿದಿರುವುದು ಸಾಮಾನ್ಯರಂತೆ ಬದುಕಲು ಹಪಹಪಿಸಿದ ಮನುಷ್ಯ ಎಂಬ ಕಾರಣಕ್ಕಾಗಿ. ಸನ್ಯಾಸದ ಬಲವಂತದ ಚೌಕಟ್ಟಿನೊಳಗೆ ಲೈಂಗಿಕ ಉದ್ವೇಗವನ್ನು ಉತ್ತುಂಗಕ್ಕೊಯ್ಯಲು ಪ್ರಯತ್ನಿಸಿದ್ದಕ್ಕಾಗಿ.

